ಅ) ಎಷ್ಟು ಬಾಲ ಕಾರ್ಮಿಕರನ್ನು ವಿದ್ಯಾರ್ಥಿನಿಲಯಗಳಿಗೆ ದಾಖಲು ಮಾಡಿದ್ದೀರಾ

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) ಹಾಸನ ಜಿಲ್ಲೆಯಲ್ಲಿ ಗುರುತಿಸಲಾದ ಬಾಲ ಕಾರ್ಮಿಕರ ಸಂಖ್ಯೆ 159. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕಿನ ಹೆಸರು	ಸಮೀಕ್ಷೆ ವೇಳೆಯಲ್ಲಿ ಗುರುತಿಸಿರುವ ಬಾಲ ಕಾರ್ಮಿಕರ ಸಂಖ್ಯೆ		ಒಟ್ಟು
		ಅಪಾಯಕಾರಿ	ಅಪಾಯಕಾರಿಯಲ್ಲದ	
1.	ಹಾಸನ	29	17	46
2.	ಅರಸೀಕೆರೆ	13	10	23
3.	ಚೆನ್ನರಾಯಪಟ್ಟಣ	09	15	24
4.	ಹೊಳೆನರಸೀಪುರ	03	07	10
5.	ಸಕಲೇಶಪುರ	06	03	09
6.	ಬೇಲೂರು	14	17	31
7.	ಆಲೂರು	01	04	05
8.	ಅರಕಲಗೂಡು	06	05	11
	ಒಟ್ಟು	81	78	159

ಅ) 119 ಬಾಲ ಕಾರ್ಮಿಕರನ್ನು ವಿದ್ಯಾರ್ಥಿನಿಲಯಗಳಿಗೆ ದಾಖಲಿಸಲಾಗಿದೆ.

ಬೇಲೂರು ಹಳೇಬೀಡು ಪ್ರವಾಸಿ ಕೇಂದ್ರದ ಅಭಿವೃದ್ಧಿ

1804 (1363) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲಾ ಬೇಲೂರು ಹಳೇಬೀಡು ವಿಶ್ವವಿಖ್ಯಾತ ಪ್ರವಾಸಿ ಕೇಂದ್ರವಾಗಿದ್ದು ಇದರ ಅಭಿವೃದ್ಧಿ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ?

ಅ) ಪ್ರವಾಸಿ ಕೇಂದ್ರವನ್ನು ಉತ್ತಮಪಡಿಸಲು ಸರ್ಕಾರವು ಯಾವ ಯೋಜನೆ ಕೈಗೊಂಡಿದೆ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು)

ಅ) - ಹೌದು -

I ಬೇಲೂರು :

1. ಪ್ರವಾಸಿ ವಸತಿ ಹಾಗೂ ಉಪಹಾರ ಗೃಹಗಳ ನಿರ್ಮಾಣ
2. ಪ್ರವಾಸಿ ಮಾಹಿತಿ ಕೇಂದ್ರದ ನಿರ್ಮಾಣ
3. ಪ್ರಸ್ತುತ ಸಾಲಿನಲ್ಲಿ ಬೇಲೂರಿನಲ್ಲಿ ಹೈಟೆಕ್ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.

II ಹಳೇಬೀಡು :

1. ಪ್ರವಾಸಿ ಗೃಹ ಹಾಗೂ ಉಪಹಾರ ನಿರ್ಮಾಣ
2. ಶೌಚಾಲಯದ ನಿರ್ಮಾಣ

3. ಹೊಯ್ಸಳ ಸುದರ್ಶನ ಕೇಂದ್ರ (ವಪ್ಪಗಿರಿ)
4. ಪ್ರಸ್ತುತ ಸಾಲಿನಲ್ಲಿ ಹೈಟೆಕ್ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.

III

1. ಬೇಲೂರು ಹಳೇಬೀಡುಗಳಿಗೆ ಹೋಗುವ ಪ್ರವಾಸಿಗರ ಅನುಕೂಲಕ್ಕಾಗಿ ಸ್ಯೆಟೇಜ್‌ಗಳನ್ನು ಅಳವಡಿಸಲಾಗಿದೆ.
2. ಬೆಂಗಳೂರು ಮತ್ತು ಮೈಸೂರಿನಿಂದ ಬೇಲೂರು ಹಳೇಬೀಡುಗಳಿಗೆ ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸಲಾಗಿದೆ.
3. ಬೇಲೂರು ಹಳೇಬೀಡುಗಳ ಬಗ್ಗೆ ಆಕರ್ಷಕ ಪ್ರವಾಸಿ ಮಡಿಕೆಗಳನ್ನು ಹೊರತರಲಾಗಿದೆ.
4. ಈ ಸ್ಥಳಗಳಿಗೆ ಬೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ತರಬೇತಿ ಪಡೆದ ಮಾರ್ಗದರ್ಶಿ ಸೇವೆಯನ್ನು ಒದಗಿಸಲಾಗಿದೆ.

ಹಾಸನ ಜಿಲ್ಲೆಗೆ ಮುಜರಾಯಿ ಅನುದಾನ ಬಿಡುಗಡೆ

1805 (1364) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಗೆ 2001-2002ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯಿಂದ ಹಣ ಬಿಡುಗಡೆ ಮಾಡಿದ್ದೀರಾ: ತಾಲ್ಲೂಕುವಾರ ವಿವರ ನೀಡುವುದು)

ಆ) 2002-2003ನೇ ಸಾಲಿನ ಅನುದಾನ ಬಿಡುಗಡೆ ಯಾವಾಗ ಮಾಡುತ್ತೀರಾ ತಿಳಿಸುವುದು.

ಶ್ರೀಮತಿ ಸುಮಾವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) 2001-2002ನೇ ಸಾಲಿನಲ್ಲಿ ದೇವಾಲಯದ ದುರಸ್ಥಿ ಮತ್ತು ನಿರ್ಮಾಣ ಯೋಜನೆಯಡಿ ಹಾಸನ ಜಿಲ್ಲೆಗೆ ಅನುದಾನ ಮಂಜೂರು ಮಾಡಿರುವ ತಾಲ್ಲೂಕುವಾರು ವಿವರ ಕೆಳಕಂಡಂತೆ ಇರುತ್ತದೆ.

ತಾಲ್ಲೂಕು	ದುರಸ್ಥಿ	ಸಂಸ್ಥೆ	ನಿರ್ಮಾಣ	ಸಂಸ್ಥೆ
ಅಲೂರು	95000-00	2	10000-00	1
ಅರಕಲಗೂಡು	20000-00	1	95000-00	5
ಸಕಲೇಶಪುರ	80000-00	4	25000-00	1
ಹೊಳೇನರಸೀಪುರ	45000-00	2	-	-
ಬೇಲೂರು	60000-00	3	-	-
ಅರಸೀಕೆರೆ	85000-00	4	-	-
ಹಾಸನ	200000-00	11	-	-
ಚೆನ್ನರಾಯ ಪಟ್ಟಣ	75000-00	2	-	-
ಒಟ್ಟು	690000-00	30	130000-00	7

ಆರಾಧನಾ ಯೋಜನೆಯಡಿ ಹಾಸನ ಜಿಲ್ಲೆಗೆ ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲು ರೂ. 16,96,968-00ಗಳನ್ನು ಬಿಡುಗಡೆ ಮಾಡಲಾಗಿದೆ.